Regd No B G. 155 Sri 19—1—1965

48 th Year
ನೇ ವರ್ಷ
★
Sri 'Satyavadi
— DAILY —
MYSORE

ಸತ್ಯವಾದಿ

ಸತ್ಯಪಕಂ— ಆಮನೆ ಪಿಲ್ಸೈದಕಂ ಎಂ ಏ ಸುಬ್ಬರಾಯುಡು 2ಪೈ]

ಪ್ರಮು ಪಿ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಸತ್ಯವಾದಿ ಪತ್ರಿಕೆಯನ್ನು ತಪ್ಪದೇ ಓದಿ
ದಿನ ಪತ್ರಿಕೆ ತಂಗಳಿಗೆ 40 ನೆ ಪೈ

Protect the Cow
ಗೋಸಂರಕ್ಷಣೆ ಮಾಡಿ

ಸತ್ತವರ ಸಂಖ್ಯೆ

ಕರಾಚಿ ಗಲಭೆಯಲ್ಲಿ 60 ಜನ ಮರಣವನ್ನು ಹೊಂದಿ ನೂರು ಜನರಿಗೆ ಪೆಟ್ಟು ಗಾಯಗಳಾದವೆಂದು ಸ್ಥಳೀಯ ಅಧಿಕಾರಿಗಳು ಪತ್ರಿಕೆಗಳಿಗೆ ತಿಳಿಸಿದ್ದರು. ಆದರೆ ಈಗ ಪಾಕಿಸ್ತಾನ ಸರ್ಕಾರವು ಈ ಸಂಖ್ಯೆಯನ್ನು ಅಲ್ಲಗಳೆದಿದೆ. ಕರಾಚಿ ಗಲಭೆಯಲ್ಲಿ ಕೇವಲ 12 ಜನ ಮಾತ್ರ ಮರಣವನ್ನು ಹೊಂದಿದ್ದಾರೆಂದು ಪಾಕಿಸ್ತಾನ ಸರ್ಕಾರವು ಹೇಳಿದೆ. ಈ ವಿಷಯದಲ್ಲಿ ಪಾಕಿಸ್ತಾನ ಸರ್ಕಾರಕ್ಕೂ ಪತ್ರಿಕೆಗಳಿಗೂ ಭಿನ್ನಾಭಿಪ್ರಾಯ ಉಂಟಾಗಿದೆ. ಪತ್ರಿಕೆಗಳು ಸತ್ತವರ ಸಂಖ್ಯೆ ಹೆಚ್ಚಾಗಿ ಹೇಳಿದ್ದರಿಂದ ಪಾಕಿಸ್ತಾನ ಸರ್ಕಾರವು ಪತ್ರಿಕೆಗಳ ಮೇಲೆ ಕ್ರಮ ಕೈಗೊಳ್ಳಲು ಸಿದ್ಧವಾಗಿದೆ. ಪತ್ರಿಕೆಗಳು ಸರ್ಕಾರದ ಈ ಕ್ರಮಕ್ಕೆ ವಿರೋಧ ಪಕ್ಷ ತಿಳಿಸಿದೆ

★

ಮೊಕದ್ದಮೆ

ಅಧ್ಯಕ್ಷ ಅಯೂಬ್ ಮಗ ಮಾಜಿ ಸೇನಾಧಿಕಾರಿ ಮತ್ತು ಈಗ ಭಾರಿ ಕೈಗಾರಿಕೋದ್ಯಮಿ ಕ್ಯಾ|| ಗುಹರ್ ಹಾಗೂ ಅವರ ಸೋದರಿಯ ಅಶ್ರಾಫ ಖಾನ್ ಮೇಲೆ ಕರಾಚಿ ಗಲಭೆ ಸಂಬಂಧದಲ್ಲಿ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಮೊಕದ್ದಮೆ ಹೂಡಿದೆ.

★

ಲಿಮಾಯೆ ಸೂಚನೆ

ಮುಂದಿನ ಸಾರ್ವಜನಿಕ ಚುನಾವಣೆಯಲ್ಲಿ ಎಸ್ಸೆಸ್ಸೆ ನಾಯಕರು ರಾಜಾಜಿಯವರೊಂದಿಗೆ ಮಾತುಕತೆ ನಡೆಸಿ ಎಸ್ಸೆಸ್ಸೆ ಸ್ವತಂತ್ರ ಪಕ್ಷ ಚುನಾವಣಾ ಒಪ್ಪಂದ ಮಾಡಿಕೊಳ್ಳಬೇಕೆಂದು ಬೆಂಗಳೂರಿನಲ್ಲಿ ತಿಳಿಸಿದರು

ಬಹುಮತ

ಶಿರೋಮಣಿ ಗುರುದ್ವಾರ ಪ್ರಬಂಧಕ ಸಮಿತಿಯಲ್ಲಿ ಸಂಕ ಅಕಾಲಿ ದಳಕ್ಕೆ ಅವಶ್ಯವಿರುವಷ್ಟು ಸ್ಥಾನಗಳು ಮಾಸ್ಟರ್ ತಾರಾಸಿಂಗರ ಗುಂಪಿನವರಿಗೆ ಮೂವತ್ತು ಮಾತ್ರ ಸ್ಥಾನ ದೊರೆತಿವೆಂದೂ ಅವು ತಿಸುವ ವಾರ್ತೆ

ನಾಳೆಯ ಪಂಚಾಂಗ

ದೈವಜ್ಞ ಶಿಖಾಮಣಿ
ಆಸ್ಥಾನ ಮಹಾವಿದ್ವಾನ್, ಧರ್ಮಾಧಿಕಾರಿ
ರಾಜಕಾರ್ಯಸಕ್ತ, ಜ್ಯೋತಿರ್ವಿದ್ವನ್ಮಣಿ
ಸಂಪತ್ಕೃಷ್ಣ ಜೋಯಿಸರಿಂದ
ಶ್ರೀ ಪ್ಲವನಾಮ ಶರದೃತುವು

ಆಹಾರ ಶೋಧನೆ

ಸಮುದ್ರದಲ್ಲಿ ಬೆಳೆಯುವ ಜೊಂಡಿನಿಂದ ಹಸಿದಿರುವ ಪ್ರಪಂಚಕ್ಕೆ ಆಹಾರ ತಯಾರಿಸಲು ಹೊಸ್ತೆಂಡುತಿಂಗಳಿಂದ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾನಿಲಯದಲ್ಲಿ ವೈಜ್ಞಾನಿಕ ರೀತಿಯ ದೊಡ್ಡ ಯೋಜನೆಯ ಪ್ರಯೋಗ ನಡೆಸಲಾಗಿದೆ ಅವು ಒಣಗಿಸಲ್ಪಟ್ಟು ಹಿಂಡಿ ಮಾಡಲ್ಪಟ್ಟಿದೆ ಸೊಯಾಬೀನಿಗಿಂತ ಹತ್ತರಷ್ಟು ಪ್ರೋಟೀನು ದೊರೆಯುತ್ತದೆ ಇದನ್ನು ಜಂದ್ರಗ್ರಹಕ್ಕೆ ಸಹ ತೆಗೆದುಕೊಂಡುಹೋಗಬಹುದು ಎಂದು ಆಂಥೊನಿ ಟಾಕರ್ ಲೇಖನ ತಿಳಿಸಿತ್ತಿದೆ

★

ಮರುವಸತಿ

ಮದ್ರಾಸಿನ ಹಂಗಾಮಿ ಗವರ್ನರಾದ ಶ್ರೀ ಚಾಂದ, ರೆಡ್ಡಿಯವರು ಎಧಾನ ಮಂಡಲದ ಜಂಟಿಅಧಿವೇಶನವನ್ನುದ್ದೇಶಿಸಿ ಭಾಷಣ ಮಾಡುತ್ತಾ, ಬಿರುಗಾಳಿಯಿಂದ ನೊಂದ ರಾಮೇಶ್ವರಂದ ಜನರಿಗೆ ಮರುವಸತಿ ನಿರ್ವಿಸುವ ಯೋಜನೆ ಅಗಿರುವುದಾಗಿ ನುಡಿದರು ಇದಕ್ಕೆ ಒಂದು ಕೋಟಿ ರೂ ವೆಚ್ಚದ ಅಂದಾಜಾಗಿದೆ ಎಂದರು

★

ಎಣ್ಣೆ ಉತ್ಪಾದನೆ ಕುರಿತು ಅಭಿಪ್ರಾಯ

ಭಾರತವು ಈಗಿನ ರೀತಿಯ ಉತ್ಪಾದನೆಯ ಪ್ರಕಾರ ತನ್ನ ಎಣ್ಣೆ ಹಾಗೂ ತೈಲವನ್ನು ತೀರಿಸಲು 40–44 ವರ್ಷಗಳನ್ನು ತೆಗೆದುಕೊಳ್ಳುವುದೆಂದು ರಷ್ಯಾದ ಭೂಭೂಗರ್ಭ ಶೋಧನಾ ಮಂತ್ರಿ ಸಿರೊಪೆಸ್ಕೊ ಕಲ್ಕತ್ತಾದಲ್ಲಿ ತಿಳಿಸಿದರು ತನ್ನ ಲೆಕ್ಕಾಚಾರದ ಪ್ರಕಾರ ಭಾರತದಲ್ಲಿ ನೂರಂದ ನೂರಿಪ್ಪತ್ತು ಮಿಲಿಯ ಎಣ್ಣೆ ಹಾಗೂ ಹದಿಮೂರು ಬಿಲಿಯ ಕ್ಯೂಬಿಕ್ ಮಿಟರು ನೈಸರ್ಗಿಕ ಅನಿಲ ಇದೆ ಎಂದು ಅವರು ನುಡಿದರು.

ಅಧಿಕಾರಿಗಳ ವಶಕ್ಕೆ

ಬೊಂಬಾಯಿ— ಇಬ್ಬರು ವ್ಯಾಪಾರಸ್ಥರಿಗೆ ಸೇರಿದ ಬ್ಯಾಂಕು ಲಾಕರುಗಳನ್ನು ತಪ್ಪಿಸಿನವರು ಶೋಧಿಸಿ 2 ಲಕ್ಷ ರೂಗಳ ಬೆಲೆಯ 1229 ತೈಗಡಿಯಾರಗಳನ್ನೂ, 59 ಸಾವಿರ ರೂಗಳ ಭಾರತದ ಕರೆನ್ಸಿ ನೋಟುಗಳನ್ನೂ ವಶಪಡಿಸಿಕೊಂಡರು.

ಆಕ್ಕಿ ಪತ್ತೆ

ವಿಜಯವಾಡ— ಇತ್ತೀಚೆ ಗಾಂಧೀಜಿಯವರ ಭಾಗದಲ್ಲಿನ ಒಂದು ಅಕ್ಕಿ ಗಿರಣಿಯಿಂದ ರೂ 330000 ಮೌಲ್ಯದ ಭತ್ತ ಮತ್ತು ಅಕ್ಕಿ ದಾಸ್ತಾನನ್ನು ಸಿ ಐ ಡಿ ಯವರು ವಶಪಡಿಸಿಕೊಂಡರು— ಅಕ್ಕಿ ವ್ಯಾಪಾರದ ಲೈಸೆನ್ಸು ಪಡೆದಿರಲಿಲ್ಲ — ಮಿಲ್ಲಿನವರ ಮೇಲೆ ಕೇಸ್ ರಿಜಿಸ್ಟರ್ ಮಾಡಿಕೊಳ್ಳಲಾಗಿದೆ.

★

ಬ್ಲಾಕು ಮಾರ್ಕೆಟ್ ಹೋಗಲು

ಬೆಂಗಳೂರು— ದಾಸ್ತಾನು ಮತ್ತು ಬ್ಲಾಕು ಮಾರ್ಕೆಟ್ ತಪ್ಪಿಸಲು ಆಹಾರಧಾನ್ಯಗಳ ಒಟ್ಟಾರೆ ವ್ಯಾಪಾರವನ್ನು ರಾಷ್ಟ್ರೀಕರಣ ಮಾಡಬೇಕೆಂದು ಶಾಸನಸಭೆಯಲ್ಲಿ ಶನಿವಾರ ಶ್ರೀ ಎಸ್ ಪಿ ಪಾಟೀಲರು ಹೇಳಿದರು

ವಾರ್ತಾ ತರಂಗ

ನವದೆಹಲಿ ವಾರ್ತೆ ಪರಮಾಣು ಸಂಶೋಧನೆಯಲ್ಲಿ ಭಾರತವು ತನ್ನ ದೇಶಕ್ಕಿಂತ ಮುಂದುವರಿದಿದೆ ಎಂದು ಯು ಗಾಸ್ಲಾವಿಯ ಪರಮಾಣು ಶಕ್ತಿ ಸಮಿತಿಯ ಅಧ್ಯಕ್ಷ ಡಾ|| ಅಂಟೊ ಮೊಲಿಕರ ಹೇಳಿಕೆಯಿತ್ತಿದ್ದಾರೆ

❋

ಹೈದರಾಬಾದಿನ ಆರ್ ಬಿ ಏ ಆರ್ ಮಹಿಳಾ ಕಾಲೇಜಿನಲ್ಲಿ ಪಾಶ್ಚಾತ್ಯವಚನ ತೆಲುಗು ಮಾಧ್ಯಮದಲ್ಲಿ ನಡೆಸಿ ಅದಕ್ಕೆ ವಿದ್ಯಾರ್ಥಿನಿಯರು ಅಭಾವದಿಂದ ಈ ಕ್ರಮವನ್ನು ತ್ಯಜಿಸಲಾಯಿತು

★

ಅಂತರರಾಷ್ಟ್ರೀಯ ವಾಣಿಜ್ಯ ಸಮ್ಮೇಳನವು ನವ ದೆಹಲಿಯಲ್ಲಿ ಮುಂದಿನ ತಿಂಗಳಿಂದ ಪತ್ರಿಂಭವಾಗುವದು ನಲವತ್ತು ದೇಶಗಳ ಸಾವಿರ ಪ್ರತಿನಿಧಿಗಳು ಆಗಮಿಸುವರು

ಮೊನ್ನೆ ಕೊಂಡಾನಯಲ್ಲಿ ಅದ ಬಿಂಕೆ ಅನಾಹುತದಲ್ಲಿ ಒಂಬತ್ತು ಮನೆಗಳು ಸುಟ್ಟು ಇಪ್ಪತ್ತೈದು ಅಡುಗಳು ಮಣ್ಣು ಹೊಂದಿದವೆಂದು ತಿಳಿದುಬಂದಿದೆ ವಾರ್ತೆ

ಶಾಂತಿ ಪರಿಸ್ಥಿತಿ ತೆಗೆಯುವಲ್ಲಿ ಸಂಯುಕ್ತ ಸೋವಿಯತ್ ಒಕ್ಕೂಟ ನಾಯಕ ಶ್ರೀ ವಿಧಾನಿಯವರು ಬೆಂಗಳೂರಿನಲ್ಲಿ ತಿಳಿಸಿದರು

ಕಾಶ್ಮೀರದ ಮಾಜಿ ಪ್ರಧಾನಿ ಭಕ್ಷಿ ಗುಲಾಂ ಮಹಮದ್ ವಿಚಾರಣೆ ಮುಂಡಲಿಯು ನೇಮಕ ಇನ್ನು 10 ದಿನಗಳಲ್ಲಿ ಸಾಗುವದಾಗಿ ಜಮ್ಮು ವಾರ್ತೆ

ತೇಜಪುರ ಗ್ರಾಮದಲ್ಲಿ ಜಯಂತಿ ಹಾಗೂ ಮದ್ಯ ತಯಾರಿಸುವ ಚಿಕ್ಕ ಫ್ಯಾಕ್ಟರಿಯನ್ನು ಪೋಲೀಸರು ವಶಪಡಿಸಿಕೊಂಡರು

ವಿವಿಧ ವಿಷಯಗಳು

ನವದೆಹಲಿ— ಈ ವರ್ಷದ ಗಣರಾಜ್ಯ ದಿನೋತ್ಸವದ ಅಂಗವಾಗಿ ನಡೆಯುವ ವಿಮಾನ (ಫ್ಲೈಪಾಸ್ಟ್) ಹಾರಾಟ ಪ್ರದರ್ಶನದಲ್ಲಿ ಭಾರತೀಯ ವಾಯು ಸೇನೆಗೆ ಸೇರಿದ 38 ವಿಮಾನಗಳು ಭಾಗವಹಿಸುವುವು.

❁

ನವದೆಹಲಿ— ಕೇಂದ್ರ ಶಿಕ್ಷಣ ಶಾಖೆಯ ಮಂತ್ರಿ ಶ್ರೀ ಚಾಗಾರ್ಲರವರನ್ನು ಗುರುವಾರ ಭೇಟಿ ಮಾಡಿದ ಬ್ರಿಟನ್ನಿನ ಸಾಗರೋತ್ತರ ಅಭಿವೃದ್ಧಿ ಶಾಖೆಯ ಮಂತ್ರಿ ಶ್ರೀಮತಿ ಬಾರ್ಬರಾ ಕ್ಯಾಸೆಲರು ಭಾರತಕ್ಕೆ ಬ್ರಿಟಿಷ್ ಹೆಚ್ಚಿನ ತಾಂತ್ರಿಕ ನೆರವನ್ನು ನೀಡುವ ಸಂಭವ ಇದೆಯೆಂದು ತಿಳಿಸಿದ್ದಾರೆ.

✱

ಬೆಂಗಳೂರು— ಸರ್ಕಾರಿ ಕಾಲೇಜುಗಳಲ್ಲಿ ಪರೀಕ್ಷೆಗಳಲ್ಲಿನ ತೇರ್ಗಡೆಯ ಶೇಕಡವನ್ನು ಹೆಚ್ಚಿಸಲು ಎಲ್ಲ ಕಾರ್ಯಕ್ರಮಗಳನ್ನೂ ಸರಕಾರ ತೆಗೆದುಕೊಂಡಿರುವುದಾಗಿ ಶನಿವಾರ ಶಾಸನ ಸಭೆಯಲ್ಲಿ ವಿದ್ಯಾ ಮಂತ್ರಿ ಶ್ರೀ ಕಂಠಿ ಹೇಳಿದರು.

❁

ನವದೆಹಲಿ— ಈ ಜನವರಿ 26 ರಿಂದ ಹಿಂದಿಯು ಭಾರತದ ಸ್ವಯಂ ಅಧಿಕೃತ ಭಾಷೆಯಾಗುವುದೆಂದು ಎಲ್ಲ ಕೇಂದ್ರ ಸರ್ಕಾರ ಅಫೇಸುಗಳಿಗೂ ಗೃಹ ಮಂತ್ರಿಯವರು ತಿಳಿಸಿರುವರು — ಇಂಗ್ಲೀಷು ಹೆಚ್ಚಿಗೆ ಅಧಿಕೃತ ಭಾಷೆಯಾಗಿರುವುದೆಂದೂ ಆದರೆ ಎಲ್ಲ ಕಾರ್ಯಗಳಿಗೂ ಉಪಯೋಗಿಸಬಹುದೆಂದೂ ತಿಳಿಸಲಾಗಿದೆ.

.....

ನವದೆಹಲಿ— ರಿಪಬ್ಲಿಕ್ ದಿನದ ಪರೇಡು ನೂತನ ಮತ್ತು ವರ್ಣರಂಜಿತ ವಿಚಾರಗಳಿಂದ ಕೂಡಿರುತ್ತದೆ.

.....

ಬೆಂಗಳೂರು— ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ಉಪಾಧ್ಯಾಯರಿಗೆ ವಸತಿ ಸೌಕರ್ಯ ಉಂಟುಮಾಡಲು ಸರಕಾರ ತೀರ್ಮಾನಿಸುವುದೆಂದು ವಿದ್ಯಾಮಂತ್ರಿ ಶ್ರೀ ಕಂಠಿಯವರು ವಿಧಾನ ಪರಿಷತ್ತಿನಲ್ಲಿ ತಿಳಿಸಿದರು.

ಗೋಹತ್ಯೆ ನಿಷೇಧದ ಕಾನೂನುಗಳು ಹೆಚ್ಚಿಗಾಗಿ ನಡೆಯಲಿ

ಗೋರಕ್ಷಣ ವ್ಯವಸ್ಥಾಪಕರ ವಿನಂತಿ

ಶ್ರೀ ದ್ವಾರಕಾ ಜಗದ್ಗುರು ಮಹಾಸ್ವಾಮಿಗಳವರ, ಶ್ರೀ ಶೃಂಗೇರಿ ಜಗದ್ಗುರು ಮಹಾಸ್ವಾಮಿಗಳವರ ಉದಾರ ಅನುಗ್ರಹ ಕೃಪೆಯಾಗಿದೆ

ಹಾಂದಾ ವಾಯಿದೆ ಮುಗಿದಿರುವವರು ದಯವಾಡಿ ನವೀಕರಿಸಬೇಕಾಗಿ ವಿನಂತಿ

✱

ಡಾ|| ಪಿ ಎಸ್ ನಾರಾಯಣ್, ಶ್ರೀ ಪಿ ಎಸ್ ವಿಶ್ವನಾಥ್, ಜಯನಗರ, ಬೆಂಗಳೂರು
ಶ್ರೀ ಪಿ ಜಿ ಶಾಸ್ತ್ರಿಗಳು (ದ ರೈಲ್ವೆ), ವಿದ್ಯಾರಣ್ಯಪುರಂ, ಮೈಸೂರು
ಶ್ರೀ ಅನಂತನಂಜಿಂಡಯ್ಯಂಗಾರ್, ಶಾಸ್ತ್ರಧರ್ಮ ಪ್ರಚಾರಸಭಾ, ಹೊಂಗನೂರು
ಗೋರಕ್ಷಣ ಆಫೀಸು, ಸತ್ಯವಾದಿ ಪ್ರೆಸ್, ಚಾಮರಾಜಪುರಂ, ಮೈಸೂರು 4

ಪುಡ್‌ಲಾಂಡ್ ಶಿಸು ಮೈಥವ 6 ನೇ ವಾರ

ಏಪ್ರಿಲ್ ಫೂಲ್ (ಹಿಂದಿ) April Fool

ಸೈರಾಬಾನು, ದಿಶ್ವಜಿತ್ ಅಭಿನಯಿಸಿರುವ, ಸ್ವಾರಸ್ಯ ಪ್ರಸಂಗಗಳು, ನಕ್ಕು ನಲಿಸುವ ಹಾಸ್ಯ ವಿನೋದ, ನೃತ್ಯ ಸಂಗೀತದಿಂದ ಕೂಡಿದ ಮನೋಲ್ಲಾಸಿಕ ಕಲಾಕೃತಿ.
– ಸುಬೋಧ ಮುಖರ್ಜಿಯವರ ಅವಿಸ್ಮರಣೀಯ ಈಸ್ಟ್‌ಮನ್ ಕಲರ್ ಚಿತ್ರ –

ಸಂತೋಷ : ಶಂಕರ್ ಜೈಕಿಶನ್ [ದಿನವಹಿ 3 ಪ್ರದರ್ಶನಗಳು]

ಆಪೆರಾ— 15-1-65 ರಿಂದ

❁ ಬೊಬಲಿ ಯುದ್ಧಮು [ತೆಲುಗು]

ಪಾತ್ರ— ಎನ್ ಟಿ ರಾಮಾರಾವ್, ಭಾನುಮತಿ, ಎಂ ಆರ್ ರಾಧಾ, ಜಮುನಾ ವಿಜಯಲಕ್ಷ್ಮಿ, ರಾಜನಾಲಾ, ಎಸ್ ವಿ ರಂಗರಾವ್ [ದಿನ 3 ಆಟಗಳು]

ಆಶೋಕಾ ಏಜೆನ್ಸೀಸ್

ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು
ನಮ್ಮಲ್ಲಿ ಎಲ್ಲ ವಿಧವಾದ ಆಯುರ್ವೇದ ಔಷಧಗಳೂ ದೊರೆಯುತ್ತವೆ.
ಎಲ್ಲಾ ಖಾಯಿಲೆಗಳಿಗೂ ಚಿಕಿತ್ಸೆ ಮಾಡಲಾಗುತ್ತದೆ

SHAKTI
SUDHA

Superb Tonic

Help The ' Gorakshana '

" ಗೋರಕ್ಷಣ " ಕ್ಕೆ ಬೆಂಬಲಿಗರಾಗಿರಿ

ಕನ್ನಡನಾಡಿನಲ್ಲಿ ಗೋರಕ್ಷಣೆ, ಪಾಣಿದಯೆ, ಶಾಕಾಹಾರ, ಪಶುವೈದ್ಯ ವಿಚಾರಗಳಿಂದ ಕೂಡಿದ ಏಕೈಕ ಪ್ರಚಾರ ಮಾಸಪತ್ರಿಕೆ.

ವಾರ್ಷಿಕ ಚಂದಾ 50 ನೈಸೆ ; ' ಗೋರಕ್ಷಣ ' ಕ್ಕೆ ಲೇಖನಗಳನ್ನೂ ಪ್ರೋತ್ಸಾಹ ಧನವನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ವಿಳಾಸ– ಗೋರಕ್ಷಣ ಆಫೀಸು ಚಾಮರಾಜಪುರಂ, ಮೈಸೂರು 4

Edited, Printed & Published by the Proprietor
Dharma Prachara Nirata M. S. Krishna Rao
the Satyavadi Press, Chamarajapuram, Mysore 4